ನಿ-330 ಕ್ರ-15 ಶಂಟ್ಯೂಬರ್

**ವಿಧಾನಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಪುಟ್ಟಣ್ಣ, ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ನಿರಾಣಿ ಹಣಮಂತ ರುದ್ರಪ್ಪ ಇವರುಗಳು ನಿಯಮ 330ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

| | |
|---|---|
| ವಿಷಯ: | ರಾಜ್ಯದ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಳೆದ ಎರಡು ವರ್ಷಗಳಿಂದ ದೇಶದಲ್ಲಿ ಕಾಡುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ತುಂಬಾ ಕಡಿಮೆಯಾಗಿದೆ. ಭೌತಿಕ ತರಗತಿಗಳು ನಡೆಯದ ಕಾರಣದಿಂದ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕಡಿಮೆಯಾಗುತ್ತಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳಿಗೆ ಶೇಕಡ 50 ಕ್ಕಿಂತ ಕಡಿಮೆ ತರಬೇತುದಾರರು ಪ್ರವೇಶಾತಿ ಆಗಿದ್ದಲ್ಲಿ ವೇತನ ನಿಲ್ಲಿಸಲು ಆದೇಶ ಮಾಡಿರುವುದರಿಂದ ಸದರಿ ನೌಕರರಿಗೆ ತುಂಬಾ ತೊಂದರೆಯಾಗಿದೆ. ಕೋವಿಡ್-19 ಕಾರಣದಿಂದ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಶೇಕಡ 50 ಕ್ಕಿಂತ ಕಡಿಮೆ ದಾಖಲಾತಿ ಇರುವ ಕಾಲೇಜುಗಳ ಕಿರಿಯ ತರಬೇತಿ ಅಧಿಕಾರಿಗಳಿಗೆ ವೇತನ ತಡೆಹಿಡಿಯಬೇಕೆಂಬ ಆದೇಶವನ್ನು ವಾಪಸ್ ಪಡೆದು ಕೂಡಲೇ ವೇತನ ಬಿಡುಗಡೆ ಮಾಡಬೇಕೆಂಬ ವಿಷಯವನ್ನು ನಿಯಮ 330ರಲ್ಲಿ ಮಾನ್ಯ ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ. |

*******

1997 ರ ಅನುದಾನ ಸಂಹಿತೆಯಲ್ಲಿ ಚಾಪ್ಟರ್ –VII ರ ಕಂಡಿಕೆ 7(6) ರಲ್ಲಿ "In all cases where the enrollment is less than 50% of the permitted intake, prior approval of the Director shall be necessary to commence the concerned Trade or unit " ಎಂಬ ನಿಯಮವಿರುತ್ತದೆ.

ರಾಜ್ಯದಲ್ಲಿನ 11 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಶೇ 50 ಕ್ಕಿಂತ ಕಡಿಮೆ ಪ್ರವೇಶಾತಿ ಹೊಂದಿರುವ ವೃತ್ತಿ/ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಸಿಬ್ಬಂದಿಗಳಿಗೆ ಅನುದಾನ ಸಂಹಿತೆಯ ನಿಯಮಾನುಸಾರ ಸದರಿ ವೃತ್ತಿ/ಘಟಕಗಳನ್ನು ಮುಂದುವರೆಸಲು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನಿರ್ದೇಶಕರ ಅನುಮೋದನೆ ಪಡೆಯಬೇಕಾಗಿತ್ತು. ಆದರೆ ಯಾವುದೇ ಅನುದಾನಿತ ಸಂಸ್ಥೆಯವರು ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದಿರುವುದಿಲ್ಲ. ಆದರೂ ಸಹ ಕೋವಿಡ್ 19 ರ ಸಾಂಕ್ರಾಮಿಕ ರೋಗದ ಕಾರಣದಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ 2020 ನೇ ಸಾಲಿನಲ್ಲಿ ಶೇ 50 ಕ್ಕಿಂತ ಕಡಿಮೆ ಪ್ರವೇಶಾತಿ ಹೊಂದಿ ವೇತನ ಪಾವತಿ ಬಾಕಿ ಇರುವ ಅನುಬಂಧದಲ್ಲಿ ಲಗತ್ತಿಸಿರುವ 11 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಸಿಬ್ಬಂದಿಗಳಿಗೆ ಆಯುಕ್ತರ ದಿನಾಂಕ: 05.09.2022 ರ ಪತ್ರದಲ್ಲಿ ತಡೆಹಿಡಿದಿರುವ ವೇತನಾನುದಾನವನ್ನು ಕೆಲವು ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು 4 ವಿಭಾಗೀಯ ಕಛೇರಿಯ ಜಂಟಿ ನಿರ್ದೇಶಕರು (ತ) ಹಾಗೂ ಅನುದಾನಿತ ಸಂಸ್ಥೆಯ ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

* * * *

**ಕೌಉಜೀಇ 81 ಕೈತಪ್ರ 2022**

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

# ಅನುಬಂಧ

| ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ 2020 ನೇ ಸಾಲಿನಲ್ಲಿ ಶೇ.50 ಕ್ಕಿಂತ ಕಡಿಮೆ ಪ್ರವೇಶಾತಿ ಇರುವ ವೃತ್ತಿ/ಘಟಕಗಳ ವಿವರ | | | | | | | | | | | |
|---|---|---|---|---|---|---|---|---|---|---|---|
| ವಿಭಾಗೀಯ ಕಛೇರಿ : ಬೆಂಗಳೂರು | | | | | | | | | | | |
| ಕ್ರಮ ಸಂಖ್ಯೆ | ಖಾಸಗಿ ಅನುದಾನಿತ ಕೈ.ತ.ಸಂಸ್ಥೆ ಹೆಸರು ಮತ್ತು ಪೂರ್ಣ ವಿಳಾಸ | ಮಂಜೂರಾದ ಸಂಖ್ಯೆಗೆ ಅನುಗುಣವಾಗಿ ಶೇಕಡಾ 50 ಕ್ಕಿಂತ ಕಡಿಮೆ ಪ್ರವೇಶಾತಿ ಹೊಂದಿರುವ ವೃತ್ತಿ/ಘಟಕಗಳ ವಿವರ | 2019 ಪ್ರವೇಶಾತಿ | | 2020 ಪ್ರವೇಶಾತಿ | | 2021 ಪ್ರವೇಶಾತಿ | | ಅನುದಾನಿತ ಸಿಬ್ಬಂದಿಯ ಹೆಸರು | ವೇತನ ತಡೆಹಿಡಿಯಲಾಗುವ ಅವಧಿ | ಅವಶ್ಯವಿರುವ ಅನುದಾನದ ಮೊತ್ತ |
| | | | ಸಂಖ್ಯೆ | ಶೇಕಡಾ | ಸಂಖ್ಯೆ | ಶೇಕಡಾ | ಸಂಖ್ಯೆ | ಶೇಕಡಾ | | | |
| 1 | Acharaya ITI, Bommasandra, Bengaluru-560099 (PU29000207) | Machinist | 15 | 75% | 9.00 | 45% | 20 | 100% | Ragavendra Govinda Dapedar | Jan-2022 to July-2022 | 800480 |
| 2 | Loyola, ITC. Bengaluru-560076 (PU29000233) | Electronics Mechanic | 17 | 71% | 8 | 33% | 24 | 100% | John Bosco A | Jan-2022 to July-2022 | 355566 |
| 3 | Kengal Hanumantaiah Industrial Training Centre Bethamangala,.Kolar - 563114 (PR29000118) | Welder | 10 | 50% | 9 | 45% | 3 | 15% | Venkatesh R | Jan-2022 to July-2022 | 775875 |
| ವಿಭಾಗೀಯ ಕಛೇರಿ : ಮೈಸೂರು | | | | | | | | | | | |
| 4 | The National Institute of Industrial Education I.T.C, No. 65 Industrial area, Visweswarayya Nagar, Musore (PU29000061) | Electronics Mechanic shift 01 unit 01 | 15+15 | 62% | 8 | 33% | 24 + 23 | 98.0% | Vanamala B | July-2021 to July-2022 | 1082424 |
| | | Mechanic (Refrigeration and Air-Conditioning) shift – 01 unit– 01 | 20 | 100.0% | 1 | 4.10% | 24 | 100.0% | Krishnamurty | July-2021 to July-2022 | 1082424 |

| | | | | | | | | | | | |
|---|---|---|---|---|---|---|---|---|---|---|---|
| ವಿಭಾಗೀಯ ಕಛೇರಿ : ಹುಬ್ಬಳ್ಳಿ | | | | | | | | | | | |
| 5. | Shri Kalidas Industrail Training Institute Badami, BAGALKOT-587201 (PR29000310) | Fitter-3rd unit | 17 | 85% | 4 | 20% | 14 | 70% | Raju Jammal | Nov-2021 to July -2022 | 450884 |
| | | Draughtsman (Civil) 2nd unit | 18 | 75% | 9 | 37.50% | 13 | 54.10% | L.P wadageri | Nov-2021 to July -2022 | 707281 |
| 6 | Shri Sanganabasaveshwar Private industrial Training, BIJAPUR (PR29000077) | Turner-1 unit | 10 | 50% | 5 | 25% | 10 | 50% | S.K Hirekubal | Nov-2021 to July -2022 | 570156 |
| 7 | Sri Banashankari Rural ITI Banashankari, BAGALKOT-587208 (PU29000138) | Fitter 3rd unit | 20 | 100% | 7 | 35% | 11 | 55% | C.N Meti | Jan-2022 to July -2022 | 404496 |
| | | Draughtsman (Mechanical) - 1st unit | 19 | 79% | 11 | 45.80% | 13 | 54.10% | M.L Kenchanagowda | Jan-2022 to July -2022 | 422598 |
| 8 | Shrimann Madhwacharya Private Industrial Training Institute, Bagalkot-587101 (PU29000079) | Fitter 01 unit | 18 | 90% | 7 | 35% | 18 | 90% | Mallari Babu | Jan-2022 to July -2022 | 571140 |
| 9 | Janata Shrikshana Sanghas Industrial Training Centre Kudachi road Banahatti TQ: Jamakhandi-587311(PU29000352) | Electrician -01 unit | 20 | 100% | 9 | 45% | 15 | 75% | B.S Matpathi | Jan-2022 to July -2022 | 350000 |
| 10 | Sri Jagadguru Gangadhara Moorusavirmath ITI Iikal, Mahanta Gangotri Campus, ILKAL Hungund, Bagalkot (PU29000146) | Fitter | 20 | 100% | 6 | 30% | 15 | 75% | Ravi Kumar | Nov-2021 to July -2022 | 702942 |
| | | Turner | 20 | 100% | 2 | 10% | 20 | 100% | Mahantesh | Nov-2021 to July -2022 | 515794 |
| ವಿಭಾಗೀಯ ಕಛೇರಿ : ಕಲಬುರಗಿ | | | | | | | | | | | |
| 11 | SVES ITI, Bhalki, Bidar Dist-585328 | Welder | 11 | | 8 | 40% | 8 | 40% | Amar singh S Taqoor | Jan-2022 to July -2022 | 5,51,481 |
| | | | | | | | | | | TOTAL | 9171701 |

ಆಯುಕ್ತರು 5/9/2022

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.